# ಬೆಲೆ

ಬೆಲೆಗೆ ತನ್ನಷ್ಟಕ್ಕೆ ಮಹತ್ವವಿಲ್ಲ. ಅದರ ಅಸ್ತಿತ್ವ ಇರುವುದು, ಯಾರಾದರೂ ಅದನ್ನು ಗುರ್ತಿಸುವುದರಲ್ಲಿ. ಹಾಗೆ ಗುರ್ತಿಸುವುದನ್ನೇ ಪೇಟೆಮಾತಿನಲ್ಲಿ ಬೆಲೆಯೇರಿಕೆ ಅಥವಾ ಬೆಲೆ ಇಳಿಕೆ ಎನ್ನುತ್ತೇವೆ. ಬೆಲೆಗೆ ಸಂಬಂಧಿಸಿದಂತೆ ಏರಿಕೆ ಹಾಗೂ ಇಳಿಕೆ, ನಾಣ್ಯವೊಂದರ ಎರಡು ಮುಖಗಳಿದ್ದಂತೆ. ಪರಿಣಾಮ, ಫಲಿತಾಂಶ, ಪ್ರತಿಫಲದ ರೂಪದಲ್ಲೂ ಬೆಲೆ ಶಬ್ದವನ್ನು ಬಳಸುವುದಿದೆ.

ಈ ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಬೆಲೆ ಇರುತ್ತದೆ ಎನ್ನುವುದೊಂದು ನಂಬಿಕೆ. ಈ ಮಾತನ್ನು ಎಚ್ಚರಿಕೆಯಿಂದ ಗಮನಿಸಬೇಕು. ಸೃಷ್ಟಿಯಲ್ಲಿನ ಪ್ರತಿಯೊಂದು ಸಂಗತಿಯೂ ಸರಕು ಎನ್ನುವುದು ಈ ಮಾತಿನ ಅರ್ಥವಲ್ಲ. ಇಲ್ಲಿನ ಬೆಲೆ ಅಸ್ತಿತ್ವವನ್ನೂ ಅನನ್ಯತೆಯನ್ನೂ ಸೂಚಿಸುವಂತಹದ್ದು. ಹುಲ್ಲಿಗೆ ಹುಲ್ಲಿನ ಬೆಲೆ ಮಲ್ಲಿಗೆಗೆ ಮಲ್ಲಿಗೆಯ ಬೆಲೆ ಎಂದು ಹೇಳುವಾಗ, ಎರಡರ ಮೌಲ್ಯವೂ ಬೇರೆ ಬೇರೆ ಆಗಿರುವುದನ್ನು ಹೇಳುವುದರ ಜೊತೆಗೆ, ಅವುಗಳಿಗೆ ಅವುಗಳದ್ದೇ ಆದ ಅಸ್ತಿತ್ವ ಇರುವುದನ್ನೂ ಸೂಚಿಸಲಾಗುತ್ತದೆ. ಅಂದರೆ, ಬೆಲೆ ಎನ್ನುವ ಶಬ್ದಕ್ಕೆ ಧಾರಣೆ ಎನ್ನುವುದಷ್ಟೇ ಅರ್ಥವಲ್ಲ; ಮೌಲ್ಯ ಎಂದೂ ಹೇಳಬಹುದು. ಬೆಲೆ ಕಟ್ಟಲಾಗದ ಸಂಗತಿಗಳೂ ಈ ಸೃಷ್ಟಿಯಲ್ಲುಂಟು.

ವಸ್ತುಗಳಿಗಷ್ಟೇ ಬೆಲೆ ಅನ್ವಯಿಸುವಂತಹದ್ದಲ್ಲ. ಜೀವಿಗಳಿಗೂ ಉಂಟು ಬೆಲೆ. ಸಾಕುಪ್ರಾಣಿಗಳನ್ನು ಬೆಲೆ ಕೊಟ್ಟು ಕೊಂಡುಕೊಳ್ಳುತ್ತೇವೆ. ವನ್ಯಮೃಗಗಳಿಗೂ, ಅವುಗಳ ಅವಯವಗಳಿಗೂ ಕಾಳಸಂತೆಯಲ್ಲಿ ಬೇಡಿಕೆಯಿದೆ; ಅರ್ಥಾತ್ ಬೆಲೆಯಿದೆ. ಮನುಷ್ಯನೂ ಒಂದು ಪ್ರಾಣಿಯಷ್ಟೇ. ಹಾಗಾಗಿ ಮನುಷ್ಯನಿಗೂ ಬೆಲೆಯಿದೆ. ಈ ಬೆಲೆ ವ್ಯಕ್ತಿತ್ವದ ಇಲ್ಲವೇ ಸ್ಥಾನಮಾನಕ್ಕೆ ಸಂಬಂಧಿಸಿದ ಮೌಲ್ಯ ಮಾತ್ರವಲ್ಲ; ಸರಕಿನ ರೂಪದಲ್ಲಿ ವ್ಯಕ್ತಿಯೇ ಚಲಾವಣೆಗೊಳ್ಳುವ ಬೆಲೆಯಿದು. ಇದು ದೇಹವ್ಯಾಪಾರದಲ್ಲಿ ತೊಡಗಿಕೊಂಡವರಿಗಷ್ಟೇ ಅನ್ವಯಿಸುವ ಮಾತಲ್ಲ. ಪಶುಗಳಂತೆ ಗುಲಾಮರನ್ನೂ ಮಾರುತ್ತಿದ್ದ ಕಥನಗಳು ಇತಿಹಾಸದಲ್ಲಿವೆ, ಪುರಾಣಗಳಲ್ಲೂ ಇವೆ. ಕಾಶಿಯ ಪೇಟೆಯಲ್ಲಿ ಹರಿಶ್ಚಂದ್ರ ತನ್ನ ಧರ್ಮಪತ್ನಿ ಚಂದ್ರಮತಿಯನ್ನು ಮಾರಿದ. ತನ್ನನ್ನೂ ಮಾರಿಕೊಂಡ. ಚಕ್ರವರ್ತಿಯಾಗಿದ್ದವನು ಮಸಣದ ಕಾವಲುಗಾರನಾದ. ಹರಿಶ್ಚಂದ್ರನ ಈ ಕಥೆಯ ಹಿಂದೆ ಇರುವಂತಹದ್ದು ಸತ್ಯದ ಬೆಲೆ. ಪುಣ್ಯಕೋಟಿ ಹಾಗೂ ಅರ್ಬುದನೆಂಬ ಹುಲಿಯ ಕಥೆಯೂ ಸತ್ಯದ ಬೆಲೆಯನ್ನು ಹೇಳುವಂತಹದ್ದೇ. ಚರಿತ್ರೆಯಂತೂ ಗುಲಾಮಗಿರಿಯ ಅಸ್ತಿತ್ವ ಹಾಗೂ ಅದರಿಂದ ಹೊರಬರುವ ಹಂಬಲದಲ್ಲಿ ನಡೆದ ಹೋರಾಟಗಳ ಸಂಕಥನವೇ ಆಗಿದೆ.

ಮನುಷ್ಯರನ್ನು ಗುಲಾಮರಂತೆ ಮಾರುವುದು ಸಹೃದಯರನ್ನು ವಿಷಣ್ಣತೆಗೆ ದೂಡುವಂಥದ್ದು, ವ್ಯಕ್ತಿಘನತೆಯನ್ನು ಕುಗ್ಗಿಸುವಂತಹದ್ದು. ಇಂದಿನ ಸಂದರ್ಭ ಭಿನ್ನವಾದುದು. ಬೆಲೆ ದೊಡ್ಡದಾದಷ್ಟೂ ವ್ಯಕ್ತಿಘನತೆ ಹಿನ್ನೆಲೆಗೆ ಸರಿಯುತ್ತಿರುವ ದಿನಗಳಿವು. 'ಇಂಡಿಯನ್ ಪ್ರೀಮಿಯರ್ ಲೀಗ್'– ಐಪಿಎಲ್– ಹೆಸರಿನಲ್ಲಿ ನಡೆಯುವ ಚುಟುಕು ಕ್ರಿಕೆಟ್ ಪಂದ್ಯಾವಳಿ ಗಮನಿಸಿ. ತಂಡಗಳ ಮಾಲೀಕರು ಆಟಗಾರರನ್ನು ಹರಾಜಿನಲ್ಲಿ ಖರೀದಿಸುತ್ತಾರೆ. ಈ ಹರಾಜಿನ ನೇರಪ್ರಸಾರ ನಡೆಯುತ್ತದೆ. ಹರಾಜಾಗುವುದು ಯಾರಿಗೂ ಅವಮಾನ ಎನ್ನಿಸುತ್ತಿಲ್ಲ. ಬೆಲೆ ಹೆಚ್ಚಿದಷ್ಟೂ ಘನತೆ ಹೆಚ್ಚು. ಎಲ್ಲರಿಗೂ ಹರಾಜಾಗುವ ಹುಚ್ಚು. 'ಒಂದೊಂದು ತಲೆಗೆ ಒಂದೊಂದು ಬೆಲೆ' (ಎಂ.ಆರ್. ದತ್ತಾತ್ರಿ ಅವರ ಕಾದಂಬರಿ.) ಸೇಲ್ ಮತ್ತು ಸೆಲೆಬ್ರಿಟಿ ಎನ್ನುವ ಪೇಟೆ ಮಾತುಗಳು ಪರಸ್ಪರ ಸಂಬಂಧ ಹೊಂದಿರುವಂತಹವು.

ಕೋಟಿಗಳೊಂದಿಗೆ ಗುರ್ತಿಸಿಕೊಳ್ಳುವ ಕ್ರಿಕೆಟಿಗರಿಗೆ ಹರಾಜು ಪ್ರಕ್ರಿಯೆ ಯಶಸ್ಸು ಮತ್ತು ಕೀರ್ತಿಯ ಏಣಿಯಂತೆ ಕಾಣಿಸುತ್ತದೆ. ಆದರೆ, ಜನಸಾಮಾನ್ಯರು ಈಗಲೂ ಹರಾಜೆಂದರೆ ಅಳುಕುವರು, ಅಂಜುವರು. ಮಾನವನ್ನು ಪ್ರಾಣ ಎಂದು ಭಾವಿಸಿದಾಗ, 'ಮರ್ಯಾದೆ ಹರಾಜಿಗಿಲ್ಲ' ಎನ್ನುತ್ತೇವೆ. ಬೆಲೆ ಕಟ್ಟಲು ಬಂದವರ ಮರ್ಯಾದೆಯನ್ನೇ ಜಾಲಾಡುತ್ತೇವೆ. ಕುಬೇರರ ಮರ್ಯಾದೆಯ ಸ್ವರೂಪವೇ ಬೇರೆ. ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗುವವರಿಗೆ ಮರ್ಯಾದೆಯ ಕುರಿತು ಅಷ್ಟೇನೂ ಮರ್ಯಾದೆ ಇರುವುದಿಲ್ಲ. ದುಡ್ಡಿರುವ ದೊಡ್ಡಪ್ಪಗಳು ಮತ್ತೊಂದು ದೇಶದಲ್ಲಿ ನೆಲೆ–ಬೆಲೆ ಕಂ(ಕೊಂ)ಡುಕೊಳ್ಳುತ್ತಾರೆ.

ಬೆಲೆ ಏರಿಕೆ ಮತ್ತು ಬೆಲೆ ಇಳಿಕೆ – ವರ್ತಮಾನದಲ್ಲಿ ಮತ್ತೆ ಮತ್ತೆ ಬಳಕೆಯಾಗುವ, ಜನಸಾಮಾನ್ಯರ ಬದುಕಿನ ಮೇಲೆ ಪರಿಣಾಮ ಬೀರುವ ಪದಗಳು. ಬೆಲೆ ಏರುತ್ತಲೇ ಇರುತ್ತದೆ. ಜನಸಾಮಾನ್ಯರ ವರಮಾನ ಏರುವುದಿಲ್ಲ. ಹಾಗಾಗಿ, ಬೆಲೆ ಏರಿದಂತೆಲ್ಲ ಜನಸಾಮಾನ್ಯರ ಬದುಕು ದುರ್ಭರವಾಗುತ್ತದೆ. ಬೆಲೆಯೇರಿಕೆ ಬಗ್ಗೆ ಪ್ರತಿಭಟನೆಯ ಸೊಲ್ಲುಗಳು ವ್ಯಕ್ತವಾಗುವುದುಂಟು. ಬಹಳಷ್ಟು ಸಂದರ್ಭಗಳಲ್ಲಿ ಆ ವಿರೋಧ, 'ಬಡವನ ಕೋಪ ದವಡೆಗೆ ಮೂಲ' ಎನ್ನುವ ಮಾತಿನಂತೆ ತಣ್ಣಗಾಗುವುದು.

ಬೆಲೆ ಇಳಿದರೂ ಕಷ್ಟವಾಗುವುದು ಶ್ರೀಸಾಮಾನ್ಯನಿಗೇ. ರೈತರ ಬೆಳೆಗೆ ನ್ಯಾಯವಾದ ಬೆಲೆ ದೊರೆಯುವುದು ವಿರಳವೇ. ಬೆಳೆ ಇಳಿಕೆಯಿಂದ ಕಂಗೆಡುವ ರೈತರು ಟೊಮ್ಯಾಟೊಗಳನ್ನೋ ಈರುಳ್ಳಿಯನ್ನೋ ಕಲ್ಲಂಗಡಿಗಳನ್ನೋ ಬೀದಿಗೆ ಚೆಲ್ಲಿ ತಮ್ಮ ಹತಾಶೆ ವ್ಯಕ್ತಪಡಿಸುವುದುಂಟು. ಬೆಲೆ ಏರಿದರೂ ಇಳಿದರೂ 'ನನ್ನ ನೆಮ್ಮದಿಗೆ ಭಂಗವಿಲ್ಲ' ಎಂದು ವ್ಯಾಪಾರಿಗಳೂ ದಲ್ಲಾಳಿಗಳೂ ಆಡಳಿತಗಾರರೂ ಹಾಯಾಗಿರುತ್ತಾರೆ.

ಬೆಲೆ ಏರಿಕೆ ಮತ್ತು ಬೆಲೆ ಇಳಿಕೆ ಅನಿಯಂತ್ರಿತವಾಗಿರುವುದು ಆರೋಗ್ಯಕರ ಸಮಾಜವೊಂದರ ಲಕ್ಷಣವಲ್ಲ. ಬೆಲೆ ನಿಯಂತ್ರಣದಲ್ಲಿರುವುದರಲ್ಲೇ ಜನಸಾಮಾನ್ಯರ ಬದುಕಿನ ನೆಮ್ಮದಿಯಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರ ಚಲಾಯಿಸುವ 'ಮತ' ಅಥವಾ 'ವೋಟು' ಯಾವುದೇ ಬೆಲೆಗೆ ನಿಲುಕದಂತಹದ್ದು. ಇತ್ತೀಚಿನ ವರ್ಷಗಳಲ್ಲಿ, 'ಮತ'ವನ್ನು ಜಗ್ಗಿ ಜಗ್ಗಿ ಅದಕ್ಕೊಂದು ಬೆಲೆ ಕಟ್ಟುವ ಪ್ರಯತ್ನ ನಡೆದಿದೆ, ಆ ಪ್ರಯತ್ನ ಯಶಸ್ವಿಯೂ ಆಗಿದೆ. ಚುನಾವಣೆಗಳಲ್ಲಿ ಗೆಲ್ಲುವುದೆಂದರೆ, ಬೆಲೆ ಕೊಟ್ಟು ಬೆಲೆ ಪಡೆಯುವುದು ಎಂದಾಗಿದೆ. ಹಣವುಳ್ಳವರಿಗೆ ಎಲ್ಲವೂ, ಪ್ರಜೆಗಳ ಮತಶಕ್ತಿಯೂ, ಜೀವವೂ ಸರಕಂತೆಯೇ ಕಾಣಿಸುವುದು. ಆ ಸರಕನ್ನು ಯಾವ ಬೆಲೆಯನ್ನಾದರೂ ತೆತ್ತು ತಮ್ಮದನ್ನಾಗಿಸಿಕೊಳ್ಳುವರು. ಕೊರೊನಾ ಕಾಲಘಟ್ಟದಲ್ಲಿ 'ಜೀವ ಬಲು ಅಗ್ಗ' ಎನ್ನುವ ಭಾವನೆ ಜನಸಾಮಾನ್ಯರಲ್ಲಿ ಉಂಟಾಯಿತಷ್ಟೇ. ಜೀವ ಸಸಾರ ಅನ್ನಿಸಲು ಕೊರೊನಾ ನೆಪವಷ್ಟೇ; ಅರಸು ಮೊರೆವ ರಾಕ್ಷಸ ಎನ್ನುವಂಥ ಸ್ಥಿತಿಯಲ್ಲಿ, ಜೀವ ಮತ್ತು ಜೀವನ ಅಗ್ಗವೇ.

■ **ಚಂಪಕಮಾಲಾ**

## ಮಾತೇ ಮುತ್ತು

- ಇಂಗ್ಲಿಷ್ ನಮಗೆ ಬೇಕು. ಆದರೆ, ನಮ್ಮ ಭಾಷೆಯ ಬದಲಿಗೆ ಅಲ್ಲ.
  –ಗೋವಿಂದ ಪೈ
- ಇನ್ನೊಬ್ಬರಿಗಾಗಿ ದುಡಿಯಿರಿ. ಅನ್ಯರ ದುಡಿಮೆಗೆ ಕೈಚಾಚಬೇಡಿ.
  –ಶರಚ್ಚಂದ್ರ
- ಪ್ರಜಾಪ್ರಭುತ್ವ ಎಂದರೆ, ದೇಶದ ಎಲ್ಲ ಜನರ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಕ್ರಾಂತಿಕಾರಕವಾಗಿ, ಹಿಂಸಾತ್ಮಕ ಮಾರ್ಗವಿಲ್ಲದೇ ಕಾನೂನಿನ ಮೂಲಕ ಬದಲಾವಣೆ ಮಾಡುವ ಸರ್ಕಾರದ ಒಂದು ಪದ್ಧತಿ.
  –ಬಿ.ಆರ್. ಅಂಬೇಡ್ಕರ್
- ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ. ಅವುಗಳಲ್ಲಿ ಕೆಲವು ಗ್ರಾಹ್ಯವಾದವು. ಕೆಲವು ತ್ಯಾಜ್ಯವಾದವು. ಯಾವುದು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಯಾವುದು ಎನ್ನುವುದು ಅವರವರ ಸ್ವಂತ ಅನುಭವವೆ.
  –ಜಿ.ಪಿ. ರಾಜರತ್ನಂ
- ಕೆಲವರಿಗೆ ಯಶಸ್ಸು ಸಿಕ್ಕುತ್ತದೆ. ಆದರೆ ಅದಕ್ಕೆ ಪಾತ್ರರು ಬೇರೆಯವರು ಆಗಿರುತ್ತಾರೆ.
  –ಅ.ನ. ಕೃಷ್ಣರಾವ್